

ಮೌಲ್ಯಗಳು ನದಿಯ ಹಾಗೆ ಹರಿಯುತ್ತಿರುತ್ತವೆಯೋ ಅಂಥ ದೇಶದಲ್ಲಿ, ಅಂಥ ಸಮಾಜದಲ್ಲಿ ನಾನು ಬದುಕಲು ಬಯಸುತ್ತೇನೆ. ನನ್ನ ದೇಶ, ನನ್ನ ಸಮಾಜ ಅಂಥದ್ದೊಂದು ಗೌರವವನ್ನು ಗಳಿಸಿಕೊಳ್ಳುತ್ತದೆ ಎಂದು ನನಗೆ ಸಂಪೂರ್ಣ ನಂಬಿಕೆ ಇದೆ.

ಪ್ರಜಾಪ್ರಭುತ್ವದಲ್ಲಿ ಕೊನೆಗೂ ಪ್ರಜೆಗಳೇ ಮುಖ್ಯ. ಜನರಿಗೆ ಸ್ವಾತಂತ್ರ್ಯ, ವಿಮೋಚನೆ, ಭ್ರಾತೃತ್ವದ ಮಹತ್ವ ಇಂದಲ್ಲಾ ನಾಳೆ ಅರಿವಾಗುತ್ತದೆ. ಆಗ ಅವರೇ ಈ ಸಮಾಜವನ್ನು ಸ್ವಸ್ಥ ದಿಕ್ಕಿಗೆ ಚಲಿಸುವಂತೆ ಮಾಡುತ್ತಾರೆ. ಯಾಕೆಂದರೆ ಭಾರತೀಯರು ಒಂದು ದಿನ ನಮ್ಮ ವಿರುದ್ಧ ಹೋರಾಟ ಮಾಡಿ ನಮ್ಮನ್ನು ದೇಶದಿಂದ ಓಡಿಸುತ್ತಾರೆ ಎಂದು ಖಂಡಿತ ಬ್ರಿಟಿಷರು ಅಂದುಕೊಂಡಿರಲಿಲ್ಲ. ಭಾರತೀಯರೊಳಗೆ ಅಂಥ ಅಗಾಧ ಶಕ್ತಿಯಿದೆ ಎಂದು ಅವರು ಕನಸಿನಲ್ಲಿಯೂ ಎಣಿಸಿರಲಿಲ್ಲ. ಬ್ರಿಟಿಷರಲ್ಲಿ ದೊಡ್ಡ ಸೈನ್ಯಶಕ್ತಿಯಿತ್ತು. ಮಾರಕಾಸ್ತ್ರಗಳಿದ್ದವು; ಅಧಿಕಾರವಿತ್ತು; ಜನರಿಗೆ ತೋರಿಸಲು ಸಾಕಷ್ಟು ಆಮಿಷಗಳೂ ಇದ್ದವು. ಆದರೆ ಜನರು ಅವರನ್ನು ಅಧಿಕಾರದಿಂದ ಕಿತ್ತು ಹೊರಗೆ ಓಡಿಸಿದರು. ಈಗಲೂ ಜನರಲ್ಲಿ ಅಂಥದ್ದೊಂದು ವಿವೇಕ, ಶಕ್ತಿ ಇದೆ. ನಾನು ನನ್ನ ದೇಶದ ಜನರಲ್ಲಿನ ವಿವೇಕವನ್ನು ನಂಬುತ್ತೇನೆ. ಅವರು ಈ ಎಲ್ಲ ಸ್ವಾರ್ಥಿ, ಭ್ರಷ್ಟ, ರಾಜಕಾರಣಿಗಳು, ಮೂಲಭೂತವಾದಿಗಳನ್ನು ಕಿತ್ತೊಗೆದು ಇಡೀ ಸಮಾಜವನ್ನು ಪುನರುಜ್ಜೀವನಗೊಳಿಸುತ್ತಾರೆ ಎಂದು ನನಗೆ ನಂಬಿಕೆ ಇದೆ. ನನ್ನ ದೇಶ ಬಹುಬೇಗ ಮತ್ತೆ ಪ್ರಗತಿಪಥಕ್ಕೆ ಮರಳಲಿದೆ.


ನಾಝಿಸಂ ಕೂಡ ಜನರಿಂದ ಚುನಾಯಿತರಾಗಿ ಪಾರ್ಲಿಮೆಂಟಿಗೆ ಬಂದವರಿಂದಲೇ ಹುಟ್ಟಿಕೊಂಡಿದ್ದು. ಬಹುಮತವೇ ಅದನ್ನು ಹುಟ್ಟುಹಾಕಿದ್ದು. ಆದರೆ ಒಂದು ಹಂತದ ನಂತರ ಜನರಿಗೆ ಅದರ ಅಪಾಯಗಳು ಅರಿವಿಗೆ ಬಂದವು. ಇದು ನಮ್ಮ ಸಮಾಜದ ಮೂಲಭೂತ ಅಗತ್ಯಗಳನ್ನು ಪೂರೈಸುವುದಿಲ್ಲ ಎಂದು ಅವರಿಗೆ ತಿಳಿಯಿತು.

ಇಂದು ಭಾರತದ ಸ್ಥಿತಿಯನ್ನೂ ಗಮನಿಸಿ. ನಾವು ಭಾರತೀಯರು ಭಾರತಕ್ಕಿಂತ ಹೆಚ್ಚು ಪಾಕಿಸ್ತಾನದ ಕುರಿತಾಗಿಯೇ ಮಾತಾಡುತ್ತೇವೆ. ನಮ್ಮ ಪ್ರಧಾನಿಗಳೂ ಭಾರತಕ್ಕಿಂತ ಹೆಚ್ಚು ಪಾಕಿಸ್ತಾನದ ಕುರಿತಾಗಿಯೇ ಮಾತಾಡುತ್ತಾರೆ. ತಾನು ಭಾರತದ ಪ್ರಧಾನಿ; ಪಾಕಿಸ್ತಾನದ ಪ್ರಧಾನಿ ಅಲ್ಲ ಎಂಬುದನ್ನು ಅವರು ಮರೆತುಬಿಟ್ಟಹಾಗಿದೆ. ಭಾರತ ಶಾಂತಿಪ್ರಿಯ ರಾಷ್ಟ್ರ. ಆದರೂ ಅವರು ನಮಗೆ ಹೊಸ ಹೊಸ ಶತ್ರುವನ್ನು ಸೃಷ್ಟಿಸುತ್ತಿದ್ದಾರೆ. ಇಲ್ಲದ ಸಮಸ್ಯೆಗಳನ್ನು ಸೃಷ್ಟಿಸುತ್ತಿದ್ದಾರೆ. ಅವರಿಗೆ ಇನ್ನೂ ಹೆಚ್ಚು ಹೆಚ್ಚು ಸಮಸ್ಯೆಗಳು ಬೇಕು. ಕಾಶ್ಮೀರ, ಅಸ್ಸಾಂ, ಎನ್‌ಆರ್‌ಸಿ, ಸಿಎಎ ಹೀಗೆ ಮುಂದಿನ ಎರಡು ದಶಕಗಳಿಗೆ ಸಾಲುವಷ್ಟು ಸಮಸ್ಯೆಗಳನ್ನು ಅವರು ಸೃಷ್ಟಿಸುತ್ತಿದ್ದಾರೆ. ಹೀಗೆ ಮಾಡುವುದರ ಮೂಲಕ ಮೂಲಭೂತ ಅಗತ್ಯಗಳಿಂದ ಜನರ ಗಮನವನ್ನು ವಿಚಲಿತಗೊಳಿಸುವ ಪ್ರಯತ್ನ ಮಾಡುತ್ತಿದ್ದಾರೆ. ಇದು ಅಸುರಕ್ಷಿತ ಭಾವವನ್ನು ಹುಟ್ಟುಹಾಕಿ ಅಧಿಕಾರ ಉಳಿಸಿಕೊಳ್ಳುವ ರಾಜಕಾರಣದ ತಂತ್ರವಷ್ಟೆ.

ಅವರು ತಮ್ಮ ಬಹುಮತವನ್ನು ದುರುಪಯೋಗಪಡಿಸಿಕೊಂಡು ಸಂವಿಧಾನವನ್ನು ಬದಲಿಸುತ್ತಿದ್ದಾರೆ. ಸಂವಿಧಾನದಲ್ಲಿಯೇ ಇರುವ ಸ್ವಸ್ಥ ಭಾರತದ ಪರಿಕಲ್ಪನೆಯನ್ನು ಛಿದ್ರಗೊಳಿಸಲು ಯತ್ನಿಸುತ್ತಿದ್ದಾರೆ. ಆದರೆ ಸಂವಿಧಾನ ಮತ್ತು ಸಂವಿಧಾನಾತ್ಮಕವಾದ ಭಾರತದ ಕನಸು ಬರೀ ಪುಸ್ತಕದಲ್ಲಿ ಮಾತ್ರ ಇರುವುದಲ್ಲ; ಅದು ಭಾರತೀಯರ ಮನಸ್ಸಿನಲ್ಲಿಯೂ ಇದೆ. ಅಧಿಕಾರವನ್ನು ಕೊಟ್ಟ ಜನರಿಗೆ ಅದನ್ನು ಕಸಿದುಕೊಳ್ಳುವ ಶಕ್ತಿಯೂ ಇದೆ. ಜನರು ತಮ್ಮ ವಿವೇಚನೆಯನ್ನು ಬಳಸಿಕೊಂಡು ಈ ದೇಶವನ್ನು ಮರಳಿ ಸ್ವಸ್ಥ ಚಲನೆಯ ದಾರಿಗೆ ಮರಳಿಸುತ್ತಾರೆ ಎಂಬ ನಂಬಿಕೆ ನನಗಿದೆ.

ಹಾಗೆ ಜನವಿವೇಕವೇ ಪ್ರಭುತ್ವಕ್ಕೆ ಬುದ್ಧಿ ಕಲಿಸುವ, ದೇಶದ ಚಲನೆಯನ್ನು ತಿದ್ದುವ ಪ್ರಕ್ರಿಯೆಗೆ 2020 ಸಾಕ್ಷಿಯಾಗಲಿ ಎಂದು ನಾನು ಆಶಿಸುತ್ತೇನೆ. ■

# ಮುಂದಿನ ಇಪ್ಪತ್ತರ ನೋಟಕ್ಕೆ ಇಂದಿನ ಇಪ್ಪತ್ತು ಮೀಸಲಿರಲಿ




**ನಾಗೇಶ ಹೆಗಡೆ**
ಲೇಖಕ – ಪತ್ರಕರ್ತ


ಭೂಮಿಯ ಜ್ವರದ ತೀವ್ರತೆಯನ್ನು ಅಳೆಯುತ್ತಿರುವ ಹನ್ನೊಂದು ಸಾವಿರ ವಿಜ್ಞಾನಿಗಳ ಮಾತನ್ನು ನಂಬುವುದಾದರೆ ಮುಂಬರುವ ಪ್ರತಿಯೊಂದು ಹೊಸ ವರ್ಷವೂ ಹೊಸ ಹೊಸ ಸವಾಲುಗಳ ವರ್ಷವೇ ಆಗಿರುತ್ತದೆ. ಈ ಸಂಗತಿಯನ್ನು ಸಮಾಜದ ಎಲ್ಲ ವರ್ಗಕ್ಕೂ – ನಿರಕ್ಷರಿಗಳಿಗೂ ತಿಳಿಸುವುದೇ 2020ರ ಆದ್ಯತೆಯ ವಿಷಯವಾಗಬೇಕು.

ಯಾವುದೇ ಹೊಸ ವಿಷಯ ಮುನ್ನೆಲೆಗೆ ಬರಬೇಕಾದರೆ ಸಾಹಿತಿಗಳೇ ಅದರ ಸಂವಹನಕಾರರಾಗುತ್ತಾರೆ. ಆದರೆ 'ಭೂಜ್ವರ'ಕ್ಕೆ ಆ ಅದೃಷ್ಟ ಇದುವರೆಗೆ ಬಂದಿಲ್ಲ. ಕವಿಗಳು, ಕತೆಗಾರರು, ಪ್ರಬಂಧಕಾರರು, ಯಾರೂ ಅದನ್ನು ಸ್ಪರ್ಶಿಸಿಲ್ಲ. ಇನ್ನು ಕಾದಂಬರಿಕಾರನ ವಿಷಯ ದೂರವೇ ಉಳಿಯಿತು. ಹಾಗೆ ನೋಡಿದರೆ ಅಮಿತಾವ್ ಘೋಷ್ ಈ ವಿಷಯವನ್ನೇ ಆಧರಿಸಿ ಬರೆದ ಇಂಗ್ಲಿಷ್ ಕಾದಂಬರಿಗೆ ಕಳೆದ ವರ್ಷ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. ಆದರೆ ಕನ್ನಡದಲ್ಲಿ ಒಂದು ಸಣ್ಣಕತೆಯೂ ಬಂದಿಲ್ಲ. ದೇವನೂರ ಮಹದೇವ ಅವರನ್ನು ಬಿಟ್ಟರೆ ಬೇರೆ ಯಾವ ಸಾಹಿತಿಯೂ ಅದನ್ನು ವೇದಿಕೆಯ ಮೇಲೆ ಪ್ರಸ್ತಾಪಿಸಿದ್ದನ್ನೂ ನಾನು ಕೇಳಿಲ್ಲ.

ಸಾಹಿತಿಗಳು ಅದನ್ನು ಮುನ್ನೆಲೆಗೆ ತರದಿದ್ದರೆ ರಾಜಕಾರಣಿಗಳು, ಮಠಾಧೀಶರು, ಅಧಿಕಾರಿ ವರ್ಗದವರು, ಶಿಕ್ಷಕರು ತಂದಾರೆಯೆ? ಡಾ. ಬಿ.ಕೆ. ಚಂದ್ರಶೇಖರ್ ಕಾಳಜಿಯನ್ನು ವ್ಯಕ್ತಪಡಿಸುತ್ತಿದ್ದಾರೆ. ಅವರ ಪತ್ನಿ, ರಂಗಕಲಾವಿದೆ ಲಕ್ಷ್ಮೀ ಚಂದ್ರಶೇಖರ್ ಅವರು 'ಕಾರ್ಬನ್ ಕೇಕ್' ಹೆಸರಿನ ನಾಟಕ ಸಿದ್ಧಪಡಿಸಿ ನಾಲ್ಕಾರು ಕಡೆ ರಂಗಪ್ರಯೋಗ ಮಾಡಿಸಿದ್ದು ಬಿಟ್ಟರೆ ಕನ್ನಡದ ಯಾವ ಪ್ರತಿಷ್ಠಿತರೂ ಭೂಜ್ವರದ ಬಗ್ಗೆ ಅಭಿವ್ಯಕ್ತಿ ತೋರಿಸಿಲ್ಲ.

ಹಿಂದಿನ 25 ವರ್ಷಗಳನ್ನು 'ಭೂಜ್ವರದ ಮುಗ್ಧತೆಯ ಯುಗ' ಎಂದು ಕರೆಯೋಣ. ಕ್ಷಮೆಯಿದೆ ಅದಕ್ಕೆ. 2020ನೇ ಇಸವಿ ಎಂದರೆ ಮಾನವಕುಲ ಮಿಸುಕಾಡಿದ ವರ್ಷ ಎನ್ನೋಣ. 'ಸಮರ ಸಿದ್ಧತೆಯ ಯುಗ'ಕ್ಕೆ ನಾವೀಗ ಪ್ರವೇಶಿಸುತ್ತಿದ್ದೇವೆ. ಸಮರದ ಬಗ್ಗೆ ಹೇಳುತ್ತಿಲ್ಲ – ಕೇವಲ ಸಿದ್ಧತೆಯ ಬಗ್ಗೆ ಹೇಳುತ್ತಿದ್ದೇನೆ.

ಯುದ್ಧ ಸಿದ್ಧತೆ ಎಂದರೆ ಕೇವಲ ಸೈನಿಕರನ್ನು ಶಸ್ತ್ರಾಸ್ತ್ರಗಳನ್ನು ಒಟ್ಟುಗೂಡಿಸುವುದಷ್ಟೇ ಅಲ್ಲ. ಸಂಪರ್ಕ ವ್ಯವಸ್ಥೆ, ಸರಕು ಸರಬರಾಜು ವ್ಯವಸ್ಥೆ, ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಅವುಗಳ ಮಧ್ಯೆ ಏರ್ಪಡಬೇಕಾದ ಸಂವಹನ ವ್ಯವಸ್ಥೆಯ ಬಗ್ಗೆ ಮುಂದಾಲೋಚನೆ ಇರಬೇಕು. ಸಂವಹನ ವ್ಯವಸ್ಥೆಯ ಲೋಪದಿಂದಾಗಿ ಸೋತವರ ಅನೇಕ ಕತೆಗಳು ನಮಗೆ ಗೊತ್ತಿದೆ.



ಇದಂತೂ ಶತ್ರುವಿಲ್ಲದ ಸಮರ. ವಿಲಕ್ಷಣ ಸಮರ. ಯಾರ ಮೇಲೂ ಏರಿ ಹೋಗುವಂತಿಲ್ಲ. ಆದರೆ ನಾವು ಯಾವ ದಿನವಾದರೂ ಯಾವುದೇ ಬಗೆಯ ದಾಳಿಗೆ ತುತ್ತಾಗಬಹುದು. ಕಡಲಂಚಿನ ಮೀನುಗಾರರು, ಅಡಿಕೆ ಬೆಳೆಗಾರರು, ವ್ಯಾಪಾರಿಗಳು, ಉದ್ಯಮಿಗಳು, ಎಚ್ಚೋಡಿಗಳು, ಬ್ಯಾಂಕ್ ಅಧಿಕಾರಿಗಳು, ಅಷ್ಟೇಕೆ ವಿಮೆ ಏಜೆಂಟರೂ ತುತ್ತಾಗಬಹುದು.

ಭೂಮಿಗೆ ಆಪತ್ತು ಬಂದಿರುವುದೇ ಎಲ್ಲ ಚಿಂತಕರ ಆದ್ಯತೆಯ ವಿಷಯವಾಗಬೇಕು. ■